## 13. ಶುಲ್ಕ ನಿಗಧಿ ಬಗ್ಗೆ:–

ಉಲ್ಲೇಖ(4)ರಲ್ಲಿನ ಸರ್ಕಾರಿ ಆದೇಶದನ್ವಯ ಈ ಕೆಳಕಂಡಂತೆ ಶುಲ್ಕ ನಿಗಧಿ ಆಗಿರುತ್ತದೆ. ಇದಲ್ಲದೆ ಯಾವುದೇ ರೀತಿಯ ಕ್ಯಾಪಿಟೇಷನ್ ಶುಲ್ಕ, ಹೆಚ್ಚಿನ ದೇಣಿ ಅಥವಾ ಶುಲ್ಕವನ್ನು ವಸೂಲಿ ಮಾಡಿದ ಬಗ್ಗೆ ದೂರು ಬಂದಲ್ಲಿ ಅಂತಹ ಪಾಲಿಟೆಕ್ನಿಕ್‌ನ ಮೇಲೆ ನಿಯಮಗಳ ಪ್ರಕಾರ ಸೂಕ್ತ ಕ್ರಮ ಜರುಗಿಸಿ, ಸರ್ಕಾರಕ್ಕೆ ವರದಿ ಮಾಡಲಾಗುವುದು.

| ಖಾಸಗಿ ಪಾಲಿಟೆಕ್ನಿಕ್‌ಗೆ ಅನ್ವಯವಾಗುವಂತೆ | | ಬೋಧನಾ ಶುಲ್ಕ | ಅಭಿವೃದ್ಧಿ ಶುಲ್ಕ | ಇತರೆ ಶುಲ್ಕ | ಒಟ್ಟು |
|---|---|---|---|---|---|
| ಅ)ಕರ್ನಾಟಕದ ಅಭ್ಯರ್ಥಿಗಳಿಗೆ | – | ₹ 12,075/- | ₹ 500/- | ₹ 830/- | ₹ 13,405/- |
| ಆ)ಕರ್ನಾಟಕೇತರ ಅಭ್ಯರ್ಥಿಗಳಿಗೆ | – | ₹ 19,425/- | ₹ 500/- | ₹ 830/- | ₹ 20,755/- |

- ಪ್ರತಿ ಸಂಸ್ಥೆಯು ಕನಿಷ್ಠ ಒಂದಾದರೂ (ಇಲಾಖೆಯಿಂದ ಎನ್.ಎಸ್.ಎಸ್ ಅನುದಾನ ಪಡೆಯುವ ಘಟಕವಾಗಲೀ/ಸ್ವ–ಆರ್ಥಿಕ ಘಟಕವಾಗಲೀ) ಘಟಕವನ್ನು ಖಡ್ಡಾಯವಾಗಿ ಹೊಂದಿರಬೇಕು.
- ಇಲಾಖೆಯಿಂದ ಎನ್.ಎಸ್.ಎಸ್ ಅನುದಾನ ಪಡೆಯುವ ಘಟಕವನ್ನು ಈಗಾಗಲೇ ಹೊಂದಿರುವ ಸಂಸ್ಥೆಗಳು ಸ್ವ–ಆರ್ಥಿಕ ಘಟಕವನ್ನು ಸಹ ಸ್ಥಾಪಿಸುವುದಿದ್ದರೇ ಮಾತ್ರ ಮೇಲ್ಕಂಡ ಶುಲ್ಕದ ಜೊತೆಗೆ ರೂ.40/–ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದ್ದು.
- ಎನ್.ಎಸ್.ಎಸ್ ಘಟಕವನ್ನು ಈವರೆಗೂ ಹೊಂದಿಲ್ಲದ ಸಂಸ್ಥೆಗಳು ಸ್ವ–ಆರ್ಥಿಕ ಎನ್.ಎಸ್.ಎಸ್ ಘಟಕ ಸ್ಥಾಪಿಸಲು ಮೇಲ್ಕಂಡ ಶುಲ್ಕದ ಜೊತೆಗೆ ಈ ವರ್ಷಕ್ಕೆ ಮಾತ್ರ ರೂ.50/–ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದು (ಮುಂದಿನ ವರ್ಷದಿಂದ ರೂ.40/–).

## 14. ಪ್ರವೇಶಕ್ಕೆ ನಿಗಧಿಪಡಿಸಿರುವ ಅಂತಿಮ ದಿನಾಂಕ:–

ಕರ್ನಾಟಕ ಸರ್ಕಾರ ಹಾಗೂ ಎಐಸಿಟಿಇಯಿಂದ ಮಾನ್ಯತೆ ಪಡೆದ ರಾಜ್ಯದಲ್ಲಿನ ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೋಮಾ ಕೋರ್ಸಿಗೆ **ದಿನಾಂಕ: 11–06–2022** ರವರೆಗೆ ಪ್ರವೇಶ ಮಾಡಿಕೊಳ್ಳುವ ಅವಕಾಶ ನೀಡಲಾಗಿದೆ. ಪ್ರಯುಕ್ತ, ಮೇಲ್ಕಂಡ ದಿನಾಂಕದೊಳಗೆ ಪ್ರವೇಶವನ್ನು ಮುಗಿಸುವ ವ್ಯವಸ್ಥೆ ಮಾಡಿಕೊಳ್ಳುವುದು.

ಉಲ್ಲೇಖ(1) ಮತ್ತು (2)ರಲ್ಲಿ ನಮೂದಿಸಿರುವ ಸರ್ಕಾರಿ ಆದೇಶದಲ್ಲಿ ತಿಳಿಸಿರುವ ಸೂಚನೆ/ ನಿಯಮಗಳನ್ನು ಮತ್ತು ಇಲಾಖೆಯ ಸುತ್ತೋಲೆಯಲ್ಲಿ ತಿಳಿಸಿರುವ ಸಾಮಾನ್ಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಪ್ರವೇಶ ನೀಡತಕ್ಕದ್ದು. ನಿಯಮಗಳನ್ನು ಉಲ್ಲಂಘಿಸಿ ಪ್ರವೇಶ ಮಾಡಿದಂತಹ ಸಂದರ್ಭಗಳಿಗೆ ಆಯಾ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿ ಹಾಗೂ ಪ್ರಿನ್ಸಿಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

## 15. ಆಯ್ಕೆ ಪಟ್ಟಿ ಹಾಗೂ ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ:–

**2022–23**ನೇ ಸಾಲಿನಲ್ಲಿ ಪ್ರವೇಶ ಹೊಂದಿದ ಅಭ್ಯರ್ಥಿಗಳ ಮಾಹಿತಿಯನ್ನು ಇಲಾಖೆಯಿಂದ ನೀಡುವ ನಿಗಧಿತ ನಮೂನೆಯಲ್ಲೇ ಭರ್ತಿಮಾಡಿ **ತ್ರಿಪ್ರತಿಯೊಂದಿಗೆ** ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ನಿಗಧಿಪಡಿಸುವ ಅಂತಿಮ ದಿನಾಂಕದ ಒಳಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸತಕ್ಕದ್ದು. **ಪ್ರವೇಶಾನುಮೋದನೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸುತ್ತೋಲೆಯನ್ನು ಕಳುಹಿಸಲಾಗುವುದು.**

ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಸಕಾಲದಲ್ಲಿ ಪಾಠಪ್ರವಚನಗಳನ್ನು ಹಾಗೂ ಪ್ರಾಯೋಗಿಕ ತರಬೇತಿಯನ್ನು ಮುಗಿಸಬೇಕಾಗಿರುತ್ತದೆ. ಪ್ರಯುಕ್ತ, ನಿಗಧಿತ ಅವಧಿಯೊಳಗೆ ಪ್ರವೇಶವನ್ನು ಮುಗಿಸಿ ನಿಗಧಿಪಡಿಸಿರುವ ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ವಯ ಪಾಠಪ್ರವಚನಗಳನ್ನು ಮತ್ತು ಪ್ರಾಯೋಗಿಕ ತರಬೇತಿಯನ್ನು ಮುಗಿಸುವಲ್ಲಿ ವ್ಯವಸ್ಥಿತ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕೆಂದು ತಿಳಿಸಲಾಗಿದೆ.

**ಕರ್ನಾಟಕದ ಆಡಳಿತ ಭಾಷೆ ಕನ್ನಡವಾಗಿರುವುದರಿಂದ, ಎಲ್ಲಾ ಪತ್ರ ವ್ಯವಹಾರಗಳನ್ನು ಕನ್ನಡದಲ್ಲೇ ಮಾಡುವುದು.**

ಪಾಲಿಟೆಕ್ನಿಕ್‌ನ ಶೈಕ್ಷಣಿಕ ಗುಣಮಟ್ಟ ಹಾಗೂ ಪ್ರವೇಶದಲ್ಲಿ ವಿದ್ಯಾರ್ಥಿಗಳ ಆಕರ್ಷಣೆ ಮತ್ತು ಪ್ರವೇಶ/ಪರೀಕ್ಷೆಯಲ್ಲಿ ಪಾರದರ್ಶಕತೆಯನ್ನು ತರುವ ದೃಷ್ಟಿಯಿಂದ ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಡ್ಡಾಯವಾಗಿ ಅನುಸರಿಸಿ ಪಾಠ ಪ್ರವಚನಗಳನ್ನು ನಿಗಧಿಪಡಿಸುವ ಶೈಕ್ಷಣಕ ವೇಳಾಪಟ್ಟಿ ಅನುಸಾರ ನಿಗಧಿತ ಅವಧಿಯ ಒಳಗೆ ಮುಗಿಸುವಲ್ಲಿ ಸಕಾಲಿಕ ಕ್ರಮ ತೆಗೆದುಕೊಳ್ಳುವುದು ಆಯಾ ಸಂಸ್ಥೆಯ ಪ್ರಿನ್ಸಿಪಾಲರ ಜವಬ್ದಾರಿಯಾಗಿರುತ್ತದೆ ಶೈಕ್ಷಣಿಕ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು.